# ಜನಪದರ ಮಾತಾ

**ಪ್ರೊ. ವಿಶ್ವನಾಥ**
ಕನ್ನಡ ಅಧ್ಯಯನ ಪೀಠ,
ಜೆ.ಎನ್.ಯು. ನವದೆಹಲಿ.
vish8460@gmail.com

ಮನೆಯೇ ಮೊದಲ ಪಾಠ ಶಾಲೆ ಜನನಿ ತಾನೇ ಮೊದಲ ಗುರುವು, ಘನತೆಯಿಂದ ಬಾಳುವುದು ಮಕ್ಕಳ, ಜನರ ಕೆಲಸ, ಕರ್ತವ್ಯ. ಭೂಮಿಯನ್ನು ತಾಯಿ, ಭೂದೇವಿ, ಕ್ಷಮೆಯಾಧರತ್ರಿ ಎಂದು ಕರೆಯುವುದು ವಾಡಿಕೆ. ಭೂಮಿಯಿಲ್ಲದೆ ಬೆಳೆ ಎಲ್ಲಿ?. ನದಿ, ತೊರೆ, ವನಗಿಡಗಳ ಸ್ವರೂಪ ಕಾಣುವುದಾದರೂ ಹೇಗೆ?. ಪಂಚತ್ವದ ಪರಿಕಲ್ಪನೆಯಲ್ಲಿ ಧರೆ, ಇಳೆ, ಭೂಮಿ, ಜಂಗಮವಾಯಿತು. 12ನೇ ಶತಮಾನದ ಶರಣರು ಜಂಗಮದಲ್ಲಿ, ಲಿಂಗದಲಿ, ವಿಭೂತಿ ಪ್ರಸಾದದಲ್ಲಿ ಈ ಭೂಮಿಯ ಅಗಾದ ಶಕ್ತಿ ಕಂಡರು. "ಒಲೆಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಬಹುದೆ" ಬಸವಣ್ಣ. ಉತ್ತರ ಭಾರತದಲಿ, ಜಗತ್ತಿನ ಅನೇಕ ಭಾಗದಲಿ ಭೂಕಂಪನವಾಗುತ್ತದೆ. ಘಟಿಸಿದ ಈ ಘಟನಾವಳಿಗಳು ಮಾನವ ಸಂತತಿಯ ನಾಶ, ಪ್ರಕೃತಿಯ ನಾಶವೂ ಆಗುತ್ತದೆ. ಆದರೂ ಒಂದು ಪಂಗಡ ಕಲ್ಲು, ಮಣ್ಣು ಮರ, ಮುಟ್ಟನ್ನು ದೇವರು ಮಾಡಿ ಶೂದ್ರರ, ರೈತರ, ದುಡಿಯುವ ಮಂದಿಯ ಹಣ್ಣು, ಹೂ, ಆಹಾರ ಪದಾರ್ಥ, ಅವರ ತೆರಿಗೆ ಹಣ ಪಡೆದು, ತಮ್ಮ ಹೊಟ್ಟೆಮುಂದಿಕೆ ತರುತ್ತಾ ಅನುದಿನವೂ ಮೋಸಮಾತ್ತಿರುವ ದೃಶ್ಯ ಇಂದೂ ನಡೆಯಯತ್ತಲೆ ಇದೆ. ರೈತರು ಬೆಳೆದ ಬೂದು ಕುಂಬಳ, ಅಕ್ಕಿ, ಅಡಕೆ, ತೆಂಗು ಈ ನಯವಂಚಕ ಪೂಜಾರಿಗಳಿಗೆ ಬೇಕು. ದೇವರ ಹೆಸರಿನಲ್ಲಿ ಶೂದ್ರನ ಕಾಣಿಕೆ ಬೇಕು. ಸಹಭೋಜನ, ಸಹಪಂಕ್ತಿ, ಅವನೇ ಬೆಳೆದ ಆಹಾರ ಪದಾರ್ಥ ಉಣ್ಣಲು ಮಡಿ ಎಂಬ ಹರಿತವಾದ ಕತ್ತಿ ಅಡ್ಡ ಬರುತ್ತದೆ. ನಮ್ಮೆಲ್ಲರ ಹುಟ್ಟು ಹೊಲಸು ಎಂಬ ಜಾಗದಿಂದಲೆ, ಆದರೆ ಅದು ಕೂಡಾ ಪವಿತ್ರವಾದ ಭಾಗವೆ. ಈ ಮಡಿವಂತರು ಅನೈತಿಕವಾಗಿ ಸುಖಪಟ್ಟಿರುವುದು ಈ ಶೂದ್ರ ರೈತಾಪಿ ಹೆಣ್ಣುಮಕ್ಕಳಿಂದಲೆ ಸುಖಕ್ಕೆ, ಕಾಮ ಪಿಶಾಚುವಿಗೆ ಶೂದ್ರರ ಹೆಂಗಳೆಯರ ಸಹವಾಸ ಮಾಡುವ ಈ ಮಡಿ ಜನರು ದೇವರ ಹೆಸರಿನಲ್ಲಿ, ಸುಲಿಗೆ, ದರೋಡೆ, ತೆರಿಗೆ ವಂಚನೆ. ಸುಳ್ಳು ಮಂತ್ರ ಪಠನೆ, ಶೂದ್ರರ, ರೈತರ ಓಟುಗಳಿಂದ ಕಾನೂನು ಮಾಡುವ ಟಂಕಶಾಲೆ ಅವರೆ ಆಗಿದ್ದಾರೆ. ದೇವರ ಪೂಜಗೆ ಇಂತಿಷ್ಟು ಎಂಬ ದರಗಳಿವೆ. ಒಂದು ದಿನವು ಒಂದು ಬಿಲ್ವಪತ್ರೆ, ಜಾಜಿ, ಮಲ್ಲಿಗೆ, ಸೇವಂತಿಗೆ ಬೆಳೆಯದ ಇವರು, ರೈತ ಶೂದ್ರರು ಬೆಳೆದು ತಂದು ಕೊಟ್ಟು ದೇವರ ಮೇಲೆ ಮಾಲೆ ಹಾಕುವ ಮಾಲೆಗೆ, ಅಕ್ಷತೆಯ ಅಕ್ಕಿಗೆ ಮಡಿಯಿಲ್ಲ. ಇಂಥ ಅನಾಚಾರವನ್ನು ಕೀರ್ತನೆಕಾರರು, ನಗೆಯು ಬರುತ್ತಿದೆ. ಎನಗೆ ನಗೆಯು ಬರುತಿದೆ ಎಂದು, ಜಗದ ಜನರ ಹೀನಾಯವಾದ ಆಚರಣೆ ಕಂಡು ಹಾಡಿದರು. ಒಂದು ದಿನವೂ ಭೂಮಿ ಉತ್ತು, ಬಿತ್ತಿ, ಬೆಳೆಯದೇ ದಪ್ಪ ದಪ್ಪ ಹೊಟ್ಟೆ ಬರಿಸಿಕೊಂಡ, ಭೋಜನ ಪ್ರಿಯರಾದರು. ರೈತ ಸಾಕಿದ ಹಸುವಿನ ಹಾಲು, ಅದರ ಬೇಣ್ಣೆ, ತುಪ್ಪ, ಮೊಸರು, ಈ ಅಜ್ಞಾನದ ಜನರಿಗೆ ಮಡಿಯಾಗಲಿಲ್ಲ. ಗ್ರಾಮಿಣ ಪರಿಸರದಲ್ಲಿ ಆರಂಭವಾದ ಈ ಮಡಿ, ಇಂದು ನಗರಗಳಲ್ಲಿ, ದೇವರ ಹೆಸರಿನಲ್ಲಿ ಕಣ್ಣ ಮುಂದೆ ಭಯಂಕರವಾಗಿ ನಡೆಯುತ್ತಿದೆ. ನಮ್ಮ ಹೊಸ ವಾಸದ ಮನೆ ಪೂಜೆ ಅವರಿಗೆ ವರುಷದ ಕೂಳು. ಅಕ್ಷರಸ್ಥರಾದಷ್ಟು, ಈ ಮಡಿವಂತಿಕೆ ವಿಷ ಹೆಚ್ಚಾಗಿದೆ. ಆ ದಿಸೆಯಲ್ಲಿ ನಾರಾಯಣ, ಶಿವನ ಹೆಸರಿನ ದೇವ ಮಂದಿರಗಳಿವೆ. ಅವುಗಳ ವಾರಸುದಾರರು ಈ ಮತಿಗೆಟ್ಟ ಜನರೆ, ಭಾರತದಲ್ಲಿ ಅರ್ವಾಚೀನ, ಪ್ರಾಚೀನ ಭಾಷೆ, ದೇವ ಭಾಷೆ ಎಷ್ಟು ಜನರಿಗೆ ತಿಳಿದಿದೆ. ಮಂತ್ರ ಎಷ್ಟು ಜನಕ್ಕೆ ತಿಳಿದೀತು. ನಮ್ಮ ರೈತ ಬಾಂಧವರು, ಶೂದ್ರರು ಬೆವರು ಸುರಿಸಿ ದುಡಿಯದೆ ಅಕ್ಕಿ, ಬೇಳೆ, ಬೆಲ್ಲ, ಮೆಣಸು, ತರಕಾರಿ ನೀಡದೇ ಇದ್ದರೆ, ನಮ್ಮ ಹೂ ಫಲಗಳನ್ನು ಅವರಿಗೆ ಒಂದು ದಿನ ಮಂದಿರಕೆ ನೀಡದೇ ಹೋದರೆ ಅವರ ಅನುದಿನದ ದರೋಡೆ ಅಂದೇ ಕೊನೆಯಾಗುತ್ತದೆ. ಒಂದೇ ಒಂದು ವಾರದಲಿ ಉಬ್ಬಿದ ಹೊಟ್ಟೆ ತುಂಬಾ ಅನಿಲ ತುಂಬಿ ಪರಿಪಾಟಲಿಗೆ ಒಳಗಾಗುತ್ತಾರೆ. ಸುಡುವುದೊಂದೇ ಅಗ್ನಿ, ನಡೆವುದೊಂದೇ ಭೂಮಿ, ಕುಡಿವುದೊಂದೇ ಜಲ, ವಾಯು ಇಂತಿರಲು ಕುಲಗೋತ್ರವೆತ್ತಣದು ಸರ್ವಜ್ಞ, ಎಂದು ತಿರುಕ ಸರ್ವಜ್ಞ ಪ್ರಶ್ನಿಸುತ್ತಾನೆ. ಜನತೆಯ ಮನದಲ್ಲಿರುವ ಜನಪದರಲ್ಲಿ ದೇವತೆಗಳ ಕುರಿತು ಅನೇಕ ಕಥೆಗಳಿವೆ. ಪಾರ್ವತಿ, ಸರಸ್ವತಿ, ಲಕ್ಷ್ಮಿಯರು ಒಂದೆಡೆಕಲೆತು ತಮ್ಮ ಶಕ್ತಿ, ಸಮರ್ಥತೆಗಳ ಬಗ್ಗೆ ಅರಹುತ್ತಾರೆ. ಮೊದಲು ಪಾರ್ವತಿಯ ಮಾತು. "ಆಕೆಯ ಶಕ್ತಿಯಿಂದ ಜಗತ್ತುನಿಂತಿದೆ. ಆಕೆಯ ಶಕ್ತಿಯೇ ಎಲ್ಲಕ್ಕೂ ಮೂಲ ಆಧಾರ, ಚಂದ್ರನ ತಂಪಾದ ಬೆಳಕು, ಸೂರ್ಯನ ಪ್ರಕರ ಜ್ವಾಲೆ, ಆಕಾಶ, ಭೂಮಿ, ಗುಡುಗು, ಮಳೆ, ಮೋಡ, ಕಾಮನ ಬಿಲ್ಲ, ಮಿಂಚು, ನಕ್ಷತ್ರ ಎಲ್ಲವೂ ಬೆಳಗುವುದು ನನ್ನಿಂದಲೆ" ಇತಿ ನಿಮ್ಮ ಪಾರ್ವತಿ. ಜನರ ಬಾಯಿಯಲ್ಲಿ ನಾರಾಯಣೆಯಾದ ಲಕ್ಷ್ಮಿಮಾತು. "ಇಡೀ ಲೋಕಕ್ಕೆ ಊಟ ನೀಡುವವಳು, ಪಾನೀಯ ನೀಡುವವಳು ನಾನು. ದೊರೆಗೆ ಅಧಿಕಾರಿ, ಸಿರಿದಂತನಿಗೆ ಶ್ರೀಮಂತಿಕೆ ಬಂದಿರುವುದು ನನ್ನಿಂದ. ಜಗದ ಎಲ್ಲಾ ಕಾರುಬಾರು, ಬ್ರಾಂದಿ, ವಿಸ್ಕಿ, ಬೀರುಗಳನ್ನು ಜನ ಕುಡಿಯುವುದು ನನ್ನಿಂದಲೆ" ಇತಿ ನಿಮ್ಮ ಲಕ್ಷ್ಮಿ "ಮಡಿ ಮಾಡಬೇಡಿರೋ, ಮಡಿ, ಮಡಿ, ನೀವು ಮಾಡಿದ ಬಯಲು ಹೇಸಿಗೆ ನಿಮಗೆ ಕುಡಿಸುವೆ ಕಾಣಿರೋ" ಗಾಳಿ, ಹಾಡುತ್ತಾ ಹಾಡುತ್ತಾ ಮಲ್ಲಿಗೆ ಪರಿಮಳ ಸೂಸುತ್ತಿತ್ತು. ಆಗ ಸರ್ವರಲ್ಲಿ ಅರಿವಿನ ಬೀಜ ಬಿತ್ತುವ ಸರಸ್ವತಿ ತಾಯಿ ಮಾತು ಶುರುಮಾಡಿದಳು. "ಲೋಕದ ಜನರಿಗೆ ಅರವು ಮೂಡಿಸುವವಳು ನಾನು ಪ್ರಾರ್ಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗೆ ನಾನು ಅರಿವಿನ ಬೆಳಕು ನೀಡುತ್ತೇನೆ. ನನ್ನ ಬೆಳಕಿನಿಂದ, ಲೋಕದ ವ್ಯವಹಾರ, ಆಡಳಿತ, ನ್ಯಾಯಾಲಯ, ಉತ್ಪಾದನೆ, ಹಂಚಿಕೆ ನಡೆಯುತ್ತದೆ. ನನ್ನ ನಂಬಿ ಜ್ಞಾನದ ಅರಿವು ಪಡೆದರೆ, ಅವರ ಜೀವನ, ಸಂಸಾರ, ಸುಖಿ ಸಂಸಾರ ವಾಗುತ್ತದೆ. ಈ ವಿದ್ಯೆ, ಬುದ್ಧಿಯ ಮುಂದೆ ಮಿಕ್ಕೆಲ್ಲವೂ ಶೂನ್ಯ. ಇತಿ ನಿಮ್ಮವಳು ಸರಸ್ವತಿ.

"ವಿದ್ಯೆವುಳ್ಳವನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆ ಇಲ್ಲದವನ ಮುಖವು ಹಾಳೂರ
ಹದ್ದಿನಂತಿಕ್ಕೂ ಸರ್ವಜ್ಞ"

ಜ್ಞಾನವೇ ಬೆಳಕು, ಶಕ್ತಿ. ಅಜ್ಞಾನವೇ ಕತ್ತಲು ಶಿವ ಸ್ವರೂಪಿಯಾದ ಕ್ಷಕಿರಣಗಳು ಪ್ರತಿ ಮಾನವರಿಗೂ ಬೇಕು. ಈ ಚರ್ಚೆಯಲ್ಲಿ ಈಶ್ವರನ ತಲೆ ಮೂಡಿಯಲ್ಲಿ ಕುಳಿತಿದ್ದ ಗಂಗೆಯು ತನ್ನ ಮಾತು ಆರಂಭಿಸಿದಳು.

"ನನ್ನ ಮೊದಲಿನ ಆದ್ಯತೆ ಬಯಾರಿಕೆ ನೀಗುವುದು ಕೆಟ್ಟ ಜಾಗವನ್ನು ಶುದ್ಧಗೊಳಿಸುವುದು, ಮಾನವರು, ಹೆಂಗಸರು, ಮಕ್ಕಳು ಎನ್ನದೆ ಅವರ ಹೇಸಿಗೆ, ಬೆವರನ್ನು ಒರಸಿ, ಜಳಕ ಮಾಡಲು ಆದ್ಯತೆ ನೀಡುವುದು. ಮೀನು, ಮಕರ, ಎಡಿ, ತರು, ಮರ, ಲತೆ, ಬಳ್ಳಿಗಳಿಗೂ ನಾನು ಬೇಕೇಬೇಕು. ಲೋಕಕ್ಕೆ ಉಪಕಾರವಾಗಲೆಂದು ನಾನು ಮಳೆಯ ರೂಪದಲ್ಲಿ ಈ ಲೋಕಕ್ಕೆ ಹನಿಹನಿಯಾಗಿ ಸುರಿಸುತ್ತೇನೆ. ನನ್ನನ್ನು ವರುಷ, ವರ್ಷ ಎಂದು ಕರೆಯುತ್ತಾರೆ. ಜಗತ್ತಿನಲ್ಲಿ ಮಡಿವಂತಿಕೆ ಹೆಸರಲ್ಲಿ ಭಾರಿ ಅನ್ಯಾಯ, ಅಸಮತೋಲನ ನಡೆಯುತ್ತಿದೆ. ಯಾರು ಹೆಚ್ಚಲ್ಲ, ಯಾರು ಕಡಿಮೆಯಲ್ಲ. ನನ್ನನ್ನು, ಜಲ, ಗಂಗಾ, ನೀರು, ಪಾನಿ, ತಣ್ಣಿ, ಇನ್ನೂ ಮುಂತಾದ ಹೆಸರಿನಿಂದ ಕರೆಯುತ್ತಾರೆ. ನನ್ನ ಸ್ವರೂಪ ಕೆರೆ, ಕಟ್ಟಿ, ಕೊಳ, ಬಾವಿ, ಹೊಳೆ, ತೊರೆ, ಸಂದ್ರ, ಸಮುದ್ರ ಎಂದು ಗುರುತಿಸಿದ್ದಾರೆ. ನಾನಿರುವುದು ಭೂಮಿ, ಆಕಾಶ, ವಾಯು, ಅಗ್ನಿಯ ನಡುವೆ. ನನ್ನ ಮತ್ತೊಂದು ಹೆಸರು ಅಪ್ಪು. ಮಂಜುಗಡ್ಡೆ, ಹಿಮ ಎಂದು. ಕೆಂಪು ಮೂತಿಯವರು ವಾಟರ್ ಎಂದು ಕರೆದರು. ಇದರಲಿ ಮೊದಲು ಮಡಿವಂತರ ಹೊಲಸು ತೊಳೆಯುವಳು ನಾನು, ದೇವರ ಹೆಸರಿನಲಿ ಮಡಿವಂತರಿಗೆ ನೀರು ಹೊರುವವರು ಶೂದ್ರರು, ರೈತಾಪಿ ಮಕ್ಕಳು. ಅದಕ್ಕೆ ಎಲ್ಲರನೂ ಸಮಭಾವದಿಂದ ನೋಡುವ ಹೃದಯಬೇಕು. ಜಗದ ಎಲ್ಲ ಜೀವಿಗಳು ನನ್ನವರೆ. ದುಡ್ಡು ಕೊಟ್ಟು ನೀರಿನ ಬಾಟಲಲ್ಲಿ ನನ್ನನ್ನು ಇಟ್ಟಿದ್ದಾರೆ. ಈ ಮಡಿವಂತರಿಂದಲೇ ನನ್ನ ಮಲಿನಗೊಳಿಸಿ, ಅವರು ಮಾತ್ರ ಮಡಿ, ಮಡಿ ಎಂದು ಕೂಗುತ್ತಾರೆ. ಅವರು ಗತಿಸಿದಾಗ ಒಂದು ಕಾಸಿಗೂ ಯಾರೂ ಮೂಸರು" ಇಂತಿ ತಮ್ಮವಳು– ಗಂಗಾ.

ಮನುಕುಲಕೆ ಪ್ರಶ್ನಿಸುವ ಈ ಗಂಗಾ ಮಾತೆಗೆ ಮಡಿವಂತರು ಈಗಲಾದರೂ ಜನರನ್ನು ಸಮಾನತೆಯಿಂದ, ಭೇದ–ಭಾವಗಳನ್ನುಂಟು ಮಾಡದೆ, ಒಳ್ಳೆ ನೋಟದಿಂದ, ಹೃದಯದ ಅಂತರಾಳದಿಂದ ನೋಡುವಂತಾಗಲಿ. ರೈತ ಬೆಳೆಯದೆ. ನಾಡು ನಡೆಯದು, ಉಣ್ಣಲಿಕ್ಕದು. ಪಾರ್ವತಿ ದೇವಿಯ ಶಕ್ತಿ ಜನಸಮೂದಾಯದ ದುಡಿಯುವ ಶಕ್ತಿಯಾಗಬೇಕು. ಲಕ್ಷ್ಮೀಪರಿಕಲ್ಪನೆ ಜನಸಮೂಹದ ಉದ್ಧಾರದ ಆರ್ಥಿಕ ಶಕ್ತಿಯಾಗಬೇಕು. ಸರಸ್ವತಿ ಪರಿಕಲ್ಪನೆ ಜ್ಞಾನದ ಅರಿವು, ಮನುಕುಲದ ಉದ್ಧಾರ, ಶಾಂತಿ, ಸೌಹಾರ್ದತೆಯಿಂದ ಮಾನವರು ಜೀವನ ಸಾಗಿಸಬೇಕು. ಗಂಗಾ ದೇವಿಯ ಪರಿಕಲ್ಪನೆ ನಾವು ಜಗತ್ತಿನ ಹೊಲಸನ್ನು ತೊಳೆಯುವುದು ಬೇಡ. ನಮ್ಮ ನಮ್ಮ ಕೆಟ್ಟತನ ತೊಳೆದು ಮಾನವ ಕುಲದವರೊಂದಿಗೆ ಬೆರತು, ಕಲಿತು ಒಂದಾಗಿ ನಡೆಯಬೇಕು.

ನಮ್ಮ ಜನಪದರು ದೇವತೆಗಳ ಬಗ್ಗೆ ತಿಳಿದಿರುವ ಅರಿವು ಇದು. ಜನಪದರ ಬದುಕಲ್ಲಿ ಸಹಬಾಳ್ವೆ ಇದೆ. ತರ–ತಮಭೇದಗಳಿಲ್ಲ.

**ಪರಾಮರ್ಶನ:**


1. ಅನಂತರಾವ್, ಕೆ. – ಸಂಪೂರ್ಣ ಮಹಾಭಾರತ–2004.
2. ನಾರಾಯಣಮೂರ್ತಿ– ಭವ್ಯಭಾರತ–2014.
3. ರಾಜೇಗೌಡ, ಹ.ಕ. – ಜಗತ್ತಿನ ಜನಪದ ಕಲೆಗಳು–2014.
4. ಕೃಷ್ಣ ಮೂರ್ತಿ ಮತ್ತಿಘಟ್ಟ – ಹೊಸಹೊತ್ತಿಗೆ–2007.
5. ಚಂದ್ರಶೇಖರ ವಸ್ತ್ರದ(ಫಂ)– ಜಾನಪದ ಸಾಹಿತ್ಯದಲ್ಲಿ ಅವ್ವ–2017.
6. ಉಷಾ ಕಿರಣ, ಡಾ. – ಶರಣ ತತ್ವ ಚಿಂತನ–2014.